ಆ) ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಪರಿವರ್ತಿಸಲಾಗಿದೆ. ವೈದ್ಯಾಧಿಕಾರಿಗಳನ್ನು ನೇಮಕ ಮಾಡಲಾಗುವುದು.

ಇ) ಶೀಘ್ರದಲ್ಲಿಯೇ ಭರ್ತಿ ಮಾಡಲಾಗುವುದು.

ಈ) ಸರ್ಕಾರಿ ಆದೇಶ ಸಂಖ್ಯೆಯ ದಿನಾಂಕ: 28-12-93ರಲ್ಲಿ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಪರಿವರ್ತಿಸಲಾಗಿದೆ. ಮಂಜೂರಾಗಿರುವ ಹೆಚ್ಚುವರಿ ಹುದ್ದೆಗಳನ್ನು ಶೀಘ್ರದಲ್ಲಿಯೇ ಭರ್ತಿ ಮಾಡಲಾಗುವುದು.

ಕಮಲಾಪುರ ಕ್ಷೇತ್ರದ ಕಾಲೇಜುಗಳು.

436 - ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಮಲಾಪುರ ಮತಕ್ಷೇತ್ರದಲ್ಲಿ ಬರುವ ಕಾಲೇಜುಗಳೇಷ್ಟು? (ಪಿ.ಯು.ಸಿ. ಹಾಗೂ ಪದವಿ ಕಾಲೇಜುಗಳನ್ನು ಪ್ರತ್ಯೇಕ ವಿವರ ಒದಗಿಸುವುದು).

ಆ) ಈ ಎಲ್ಲಾ ಕಾಲೇಜುಗಳಿಗೂ ಸಾಕಷ್ಟು ಶಿಕ್ಷಕ ಸಿಬ್ಬಂದಿ ಇದೆಯೇ ಹಾಗಿಲ್ಲದಿದ್ದಲ್ಲಿ ಕೊರತೆ ಇರುವ ಸ್ಥಳಗಳಾವುವು ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡ ಕ್ರಮಗಳೇನು?

ಇ) ಸ್ವಂತ ಕಟ್ಟಡ ಇರುವ ಹಾಗೂ ಇಲ್ಲದೆ ಇರುವ ಸರ್ಕಾರಿ ಕಾಲೇಜುಗಳ ಸಂಖ್ಯೆ ಎಷ್ಟು ನಿರ್ಮಿಸಲು ಯೋಜನೆಯೇನಾದರೂ ಸರ್ಕಾರದ ಮುಂದೆ ಇದೆಯೇ ಹಾಗಿದ್ದಲ್ಲಿ, ಯಾವಾಗ ನಿರ್ಮಿಸಲಾಗುವುದು?

ಶ್ರೀ ಡಿ. ಮಂಜುನಾಥ (ಉನ್ನತ ಶಿಕ್ಷಣ ಸಚಿವರು) :

ಅ) 1) ಕಾಲೇಜು ಶಿಕ್ಷಣ ನಿರ್ದೇಶನಾಲಯದ ಅಧೀನದಲ್ಲಿ ಬರುವ ಪದವಿ ಕಾಲೇಜುಗಳು

ಒಂದು

2) ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯದ ಅಧೀನದಲ್ಲಿ ಬರುವ ಪದವಿ ಪೂರ್ವ ಕಾಲೇಜುಗಳು

07 ಪದವಿ ಪೂರ್ವ ಕಾಲೇಜುಗಳು ಈ ಕೆಳಕಂಡಲ್ಲಿರುತ್ತವೆ.

1) ಕಮಲಾಪುರ, 2) ನರೋಣಾ, 3) ಖಜೂರಿ, 4) ಚಿಂಚನಸೂರ, 5) ವಿ.ಕೆ. ಸಲಗರ 6) ಮುನ್ನಳ್ಳಿ, 7) ಮಹಾಗಾಂವ.

ಆ) ಕಾಲೇಜು ಶಿಕ್ಷಣ ನಿರ್ದೇಶನಾಲಯದ ಹತೋಟಿಯಲ್ಲಿ ಬರುವ ಪದವಿ ಕಾಲೇಜಿಗೆ ಸಂಬಂಧಿಸಿದಂತೆ

ಕಮಲಾಪುರ ಪದವಿ ಕಾಲೇಜಿನಲ್ಲಿ 09 ಉಪನ್ಯಾಸಕರ ಕೊರತೆ ಇದೆ. ಕರ್ನಾಟಕ ಲೋಕಸೇವಾ ಆಯೋಗದಿಂದ ಅಭ್ಯರ್ಥಿಗಳ ಪಟ್ಟಿಯನ್ನು ಕಾಯಲಾಗಿದೆ. ಈ ಮಧ್ಯೆ ಅರೆಕಾಲಿಕ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲು ಸರ್ಕಾರ ಅನುಮತಿ ನೀಡಿದೆ.

ಆ) ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯದ ಅಧೀನದಲ್ಲಿ ಬರುವ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ

07 ಪದವಿ ಪೂರ್ವ ಕಾಲೇಜುಗಳಲ್ಲಿನ ಕೊರತೆ ಇರುವ ಉಪನ್ಯಾಸಕರ ವಿವರಗಳು ಕೆಳಕಂಡಂತಿವೆ.

1.	ಕಮಲಾಪುರ	3 ಉಪನ್ಯಾಸಕರ ಹುದ್ದೆಗಳು
2.	ನರೋಣಾ	5 -"-
3.	ಖಜೂಂ	5 -"-
4.	ಚಿಂಚನಸೂರ	3 -"-
5.	ವಿ.ಕೆ.ಸಲಗರ	5 -"-
6.	ಮುನ್ನಳ್ಳಿ	4 -"-
7.	ಮಹಾಗಾಂವ್	2 -"-

ಕರ್ನಾಟಕ ಲೋಕಸೇವಾ ಆಯೋಗದಿಂದ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಕಾಯಲಾಗಿ ಮೇಲ್ಕಂಡ ಎಲ್ಲಾ ಖಾಲಿ ಹುದ್ದೆಗಳನ್ನು ಲೋಕಸೇವಾ ಆಯೋಗದಿಂದ ಪಟ್ಟಿ ಸ್ವೀಕೃತವಾದ ನಂತರ ಭರ್ತಿ ಮಾಡಲಾಗುವುದು.

ಆ) ಕಮಲಾಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ ನಿರ್ಮಾಣಕ್ಕಾಗಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಯೋಜನೆ ಅಡಿಯಲ್ಲಿ 1995-96ನೇ ಸಾಲಿಗೆ ರೂ. 8 ಲಕ್ಷಗಳನ್ನು ಒದಗಿಸಲಾಗಿದೆ. ಮತ್ತು ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆಯಿಂದ ಕಾಯಲಾಗಿದೆ.

ಇ) 07 ಪದವಿ ಪೂರ್ವ ಕಾಲೇಜುಗಳು ಸಂಯುಕ್ತ ಪದವಿ ಪೂರ್ವ ಕಾಲೇಜುಗಳಾದ ಪ್ರಯುಕ್ತ ಪ್ರೌಢಶಾಲೆ ಮತ್ತು ಕಾಲೇಜುಗಳು ಒಂದೇ ಕಟ್ಟಡದಲ್ಲಿ ನಡೆಯುತ್ತಿವೆ. ನರೋಣಾ ಹಾಗೂ ವಿ.ಕೆ.ಸಲಗರ ಇಲ್ಲಿನ ಕಾಲೇಜುಗಳಲ್ಲಿ ತರಗತಿ ಕೊಠಡಿಗಳನ್ನು ನಿರ್ಮಿಸಲು ಪ್ರಸ್ತಾಪಗಳು ಸ್ವೀಕೃತವಿದ್ದು, ಪರಿಶೀಲನೆಯಲ್ಲಿದೆ.

ಸರ್ಕಾರಿ ಕಾಲೇಜುಗಳಿಗೆ ಸ್ವಂತ ಕಟ್ಟಡ ಒದಗಿಸುವ ಕಾರ್ಯಕ್ರಮವು ಅನುಷ್ಠಾನದಲ್ಲಿ ಪಟ್ಟಿ ಅಯವ್ಯಯದಲ್ಲಿ ಯೋಜನೆಯಡಿ ಒದಗಿಸಲಾದ ಮೊತ್ತವನ್ನು ಅವಲಂಭಿಸಿ ಹೊಸ ಹಾಗೂ

ಮುಂದುವರೆದ ಕಾಮಗಾರಿಗಳನ್ನು ಯೋಜನಾ ಕಾರ್ಯಕ್ರಮಕ್ಕನುಗುಣವಾಗಿ ಕೈಗೊಳ್ಳಲಾಗುವುದು.

1995-96 ನೇ ಸಾಲಿನಲ್ಲಿ ಸರ್ಕಾರಿ ಪ್ರೌಢ ಶಾಲೆಗಳು

437 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲ್) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಈ ವರ್ಷ ಎಷ್ಟು ಸರ್ಕಾರಿ ಪ್ರೌಢಶಾಲೆಗಳನ್ನು ತೆರೆಯಲಾಗಿದೆ.

ಆ) ಇಲ್ಲವಾದಲ್ಲಿ ಕಾರಣವೇನು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ರಾಜ್ಯದಲ್ಲಿ ಈ ವರ್ಷ ಹೊಸ ಸರ್ಕಾರಿ ಪ್ರೌಢಶಾಲೆಗಳು ಮಂಜೂರಾಗಿರುವುದಿಲ್ಲ.

ಆ) ಕಳೆದ ವರ್ಷ ಹೆಚ್ಚು ಪ್ರೌಢಶಾಲೆಗಳನ್ನು ತೆರೆದಿರುವುದರಿಂದ ಅವುಗಳನ್ನು ವ್ಯವಸ್ಥಿತವಾಗಿ ನಿಡೆಸಲು ಅವಕಾಶ ಮಾಡಿಕೊಂಡು ಮುಂದಿನ ವರ್ಷ 'ಸ್ಕೂಲಮ್ಯಾಪ್' ಆಧಾರದ ಮೇಲೆ ಹೊಸ ಪ್ರೌಢಶಾಲೆಗಳನ್ನು ತೆರೆಯಲಾಗುವುದು.

ಶಾಂತಿ ನಗರದಲ್ಲಿ ಸರ್ಕಾರಿ ಪ್ರೌಢಶಾಲೆಗಳು.

439 - ಶ್ರೀಮತಿ ಡಿ.ಜಿ. ಹೇಮಾವತಿ (ಶಾಂತಿನಗರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಂತಿ ನಗರ ವಿಧಾನಸಭಾ ಕ್ಷೇತ್ರದಲ್ಲಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳೆಷ್ಟು?

ಆ) ಈ ಶಾಲೆಗಳಲ್ಲಿರುವ ಹುದ್ದೆಗಳು ಅಥವಾ ಖಾಲಿ ಇರುವ ಶಿಕ್ಷಕರ ಹುದ್ದೆಗಳೆಷ್ಟು?

ಇ) ಈ ಹುದ್ದೆಗಳನ್ನು ತುಂಬಲು ತೆಗೆದುಕೊಂಡಿರುವ ಕ್ರಮಗಳೇನು?

ಈ) ಈ ಶಾಲೆಗಳಿಗೆ ಶಾಲಾಭಿವೃದ್ಧಿ ಸಮಿತಿಗಳನ್ನು ನೇಮಕ ಮಾಡಲಾಗಿದೆಯೇ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) ಪ್ರಾಥಮಿಕ ಶಾಲೆಗಳು - 14

ಪ್ರೌಢ ಶಾಲೆಗಳು - 06

ಆ)

	ಮಂಜೂರಾದ ಹುದ್ದೆಗಳು	ಖಾಲಿಇರುವ ಹುದ್ದೆಗಳು
ಪ್ರಾಥಮಿಕಶಾಲೆ	85	ಇಲ್ಲ
ಪ್ರೌಢಶಾಲೆ	51	02